ಪತ್ರಕರ್ತ ಎಂ.ಕೆ. ಭಾಸ್ಕರ ರಾವ್ ಅವರದು 'ಕನ್ನಡ ಸಾಂಸ್ಕೃತಿಕ ಪತ್ರಿಕೋದ್ಯಮ'ದಲ್ಲಿ ಪ್ರಮುಖ ಹೆಸರು. ಸಾಹಿತ್ಯ, ಸಂಗೀತ, ಚಿತ್ರಕಲೆ ಹಾಗೂ ಸಿನಿಮಾಗಳಲ್ಲಿ ಗಾಢ ಆಸಕ್ತಿ ಹೊಂದಿರುವ ಅವರು, ತಮ್ಮ ಆಸಕ್ತಿಯನ್ನು ಬರವಣಿಗೆಯಲ್ಲೂ ಅಭಿವ್ಯಕ್ತಗೊಳಿಸುತ್ತಿರುವ ಪತ್ರಕರ್ತ. ಒಳ್ಳೆಯ ಓದುಗರೂ ಆದ, 'ಸಾಹಿತ್ಯ ನಮ್ಮನ್ನು ನಾವು ಬೆಳೆಸಿಕೊಳ್ಳಲು ಅಗತ್ಯವಾದ ಮಾಧ್ಯಮ'ವೆಂದು ನಂಬಿದ ಭಾಸ್ಕರ ರಾವ್ ಈಗ ಕಥೆಗಳ ಲೋಕದಲ್ಲಿ ವಿಹರಿಸುತ್ತಿದ್ದಾರೆ.

ಬಸ್ಸು ಶಿರಸಿ ಹಳೆ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿದ್ದ ಪ್ರಯಾಣಿಕರನ್ನು ತುಂಬಿಕೊಂಡು ಹೊರಡುವ ಹೊತ್ತಿಗೆ ಮೊಬೈಲ್ ಗುನುಗತೊಡಗಿತು. ಹೌದೇ ಹೌದು ಚಂದ್ರಹಾಸನೇ ಫೋನ್ ಮಾಡಿದ್ದ. ರೋಹಿತ್ ಹಲೋ ಎನ್ನುವುದನ್ನೆ ಕಾದಿದ್ದವನಂತೆ ಚಂದ್ರಹಾಸ, 'ನಾನು ಹೇಳೋದನ್ನು ಮೊದಲು ಕೇಳಿಸಿಕೊ ದೋಸ್ತ್' ಎಂದು ತಾಕೀತು ಮಾಡಿದ. 'ಆಯ್ತು ಹೇಳುಮಾರಾಯಾ' ಎಂದ ರೋಹಿತ್ ಮುಖ ಕ್ರಮೇಣ ಸಪ್ಪಗಾಯಿತು; ಉತ್ಸಾಹ ಹಾರಿ ಹೋಯಿತು.

ಅಂವ ಹೇಳಿದ್ದಿಷ್ಟು: 'ಶಿವಮೊಗ್ಗದಲ್ಲಿ ಕೋಮು ಗಲಭೆ ಶುರುವಾಗಿದೆ ಮಾರಾಯಾ. ಒಂದು ಹೆಣ ಬಿದ್ದಿದೆ ಎಂಬ ವದಂತಿ ಹರಡಿದೆ. ರಾತ್ರಿ ಕರ್ಫ್ಯೂ ಹಾಕಿದ್ದಾರೆ. ಅಲ್ಲಲ್ಲಿ ಬೆಂಕಿ ಹಚ್ಚುವುದು, ಲೂಟಿ ಮಾಡುವುದು, ಹೊಡೆಯುವುದು ಬಡಿಯುವುದು ಇರಿಯುವುದೇ ಮುಂತಾದ ಗಲಾಟೆ ಜೋರಾಗೇ ಇದೆ. ಐಜಿ ಬರ್ತಾ ಇದಾರೆ, ಜಿಲ್ಲಾ ಉಸ್ತುವಾರಿ ಸಚಿವರೂ ಬೆಂಗಳೂರು ಬಿಟ್ಟದ್ದಾರೇಂತ ಮೆಸೇಜ್ ಬಂದಿದೆ. ಶಿವಮೊಗ್ಗಕ್ಕೆ ಬರುವ ವಾಹನಗಳನ್ನೆಲ್ಲ ನಗರದ ಗಡಿಯಾಚೆಗೇ ಪೊಲೀಸರು ನಿಲ್ಲಿಸ್ತಿದ್ದಾರೆ. ಇಂಥ ಪರಿಸ್ಥಿತೀಲಿ ಶಿವಮೊಗ್ಗಕ್ಕೆ ನೀನು ಬರ್ಲೇ ಬೇಡ, ಶಿರಸಿಯಲ್ಲೇ ಉಳಿ ಅಥವಾ ಸಾಗರದಲ್ಲಿ ನೈಟ್ ಹಾಲ್ಟ್ ಮಾಡು, ಉಳಿದಿದ್ದನ್ನು ರಾತ್ರಿ ಎಷ್ಟು ಹೊತ್ತಿಗಾದರೂ ಹೇಳ್ತೇನೆ. ಈಗ ಸ್ಟೋರಿ ಫೈಲ್ ಮಾಡಬೇಕು, ನನಗೆ ಟೈಮಿಲ್ಲ , ಎಕ್ಸ್ಯೂಸ್ ಮೀ ಪ್ಲೀಸ್' ಎಂದು ಬಡಬಡಿಸಿ ಗುಡ್‌ನೈಟ್ ಹೇಳಿ ರೋಹಿತ್‌ನ ಪ್ರತಿಕ್ರಿಯೆಗೂ ಕಾಯದೆ ಲೈನ್ ಕಟ್ ಮಾಡಿದ್ದ.

ಸಿದ್ದಾಪುರ ಮಾರ್ಗವಾಗಿ ಸಾಗರದತ್ತ ಬಸ್ ಹೊರಟಿತ್ತು. ಮಧ್ಯದಲ್ಲಿ ತಾಳಗುಪ್ಪದಲ್ಲಿ ಬಸ್ ನಿಲ್ಲುತ್ತದೆ. ಅಲ್ಲಿಂದ ಮೂರ್ನಾಲ್ಕು ಕಿಮೀ ಫಾಸಲೆಯಲ್ಲಿ ಬಂಧುಗಳನೇಕರ ಮನೆ ಇರುವುದು ಅದೇ ಮೊದಲಿಗೆ ಎಂಬಂತೆ ರೋಹಿತ್ ನೆನಪಲ್ಲಿ ಹಾಯಿತು. ಸಮಯ ನೋಡಿದ. ಹನ್ನೆರಡು ದಾಟಿತ್ತು. ಇಷ್ಟು ಹೊತ್ತಿನಲ್ಲಿ ಅವರಲ್ಲಿಗೆ ಹೋಗುವುದಾದರೂ ಹೇಗೆ? ಬಹುತೇಕ ಸಂಬಂಧಿಕರು ಸ್ವಂತ ವಾಹನವುಳ್ಳವರೇ. ಆದರೆ, ಮಲಗಿರುವ ಅವರನ್ನು ಎಬ್ಬಿಸಿ... ಎಂಬೆಲ್ಲ ಯೋಚನೆಯನ್ನು ತುಂಡರಿಸಿ ತೊಂದರೆ ಕೊಡುವ ಉಸಾಬರಿ ಬೇಡವೇ ವೇಡ ಎಂಬ ತೀರ್ಮಾನಕ್ಕೆ ಬಂದ. ಸಾಗರದಲ್ಲಿ ಬೇಕಷ್ಟು ಲಾಡ್ಜ್‌ಗಳಿವೆ ಎಂಬ ಪರಿಹಾರ ಕಾಣಿಸಿದ ನೆಮ್ಮದಿಯಲ್ಲಿ ಕಿಟಕಿ ಗಾಜನ್ನು ಅರ್ಧ ಇಂಚು ಸರಿಸಿ ತಣ್ಣನೆಯ ಗಾಳಿಗೆ ಮುಖ ಒಡ್ಡಿದ. ತಾಳಗುಪ್ಪ ರೈಲ್ವೆ ಹಳಿ ದಾಟಿದರೆ ತಿರುವೇ ಇಲ್ಲದ ಒಂದೋ ಎರಡೋ ಕಿಮೀ ನೇರ ರಸ್ತೆ. ಅಕ್ಕಪಕ್ಕ ನೂರಾರು ಎಕರೆ ಭತ್ತದ ಗದ್ದೆ. ಭಾರೀ ಮಳೆಗಾಲದಲ್ಲಿ ಸಂಪೂರ್ಣ ಜಲಾವೃತವಾಗಿ ಬೃಹತ್ ಸರೋವರದ ರೂಪ ತಳೆಯುವ ಮಲೆನಾಡಿನ ರಮಣೀಯ ಸ್ಥಳಗಳಲ್ಲಿ ಇದೂ ಒಂದು. ಯೋಗರಾಜ ಭಟ್ಟರು 'ಮುಂಗಾರು ಮಳೆ' ಸಿನಿಮಾಕ್ಕೆ ಹಾಡೊಂದನ್ನು ಚಿತ್ರೀಕರಿಸಿದ್ದು ಇಲ್ಲೇ ಅಲ್ಲವೆ ಎನ್ನುವುದು ಮನಸ್ಸಿಗೆ ಬರುತ್ತಿದ್ದಂತೆ ಆ ಸಿನಿಮಾಕ್ಕಾಗಿ ಜಯಂತ ಕಾಯ್ಕಿಣಿ ಬರೆದ 'ಮುಂಗಾರು ಮಳೆಯೇ' ಹಾಡನ್ನು ಅರಿವೇ ಇಲ್ಲದೆ ಸಣ್ಣ ಧ್ವನಿಯಲ್ಲಿ ಗುನುಗಲಾರಂಭಿಸಿದ. ಒಂದು ಸಾಲನ್ನಾದರೂ ಹಾಡಿ ಪೂರೈಸಿದ್ದನೋ ಇಲ್ಲವೋ ಬಸ್ಸು ಮುಗ್ಗರಿಸಿ ಧಡ್ ಎಂದು ಒಂದೇ ಏಟಿಗೆ ನಿಂತು ನಿದ್ರೆಯಲ್ಲಿದ್ದ ಪ್ರಯಾಣಿಕರಲ್ಲಿ ಬಹುತೇಕರು ಚಿಟಾರ್ ಎಂದು ಬೆದರಿ ಚೀರುವಂತೆ ಮಾಡಿತು. ಎದುರಿಂದ ಬಂದ ವಾಹನಕ್ಕೊ ರಸ್ತೆ ಬದಿಯ ಸಾಲು ಮರಕ್ಕೊ ಬಸ್ಸು ಢಿಕ್ಕಿಯಾಗಿದೆ, ಎಷ್ಟು ಜನರ ಪ್ರಾಣ ಹೋಯಿತೊ, ಯಾರೆಲ್ಲ ಕೈಕಾಲು ಸೊಂಟ ಮುರಿದುಕೊಂಡರೋ ಎಂಬಂತೆ ಗಾಬರಿಯಾದರು. ಎದುರು ಸೀಟಿಗೆ ಹಣೆ ಮೂಗು ಗುದ್ದಿ ಕೆಲವರಿಗೆ ಸಾಕಷ್ಟು ಏಟು, ಗಾಯ ಆಯಿತು.